21 ವಿಷಯ ಕೃಷ್ಣ ನದಿಯ ಹಿನ್ನೀರಿನ ಬಳಕೆಗೆ ಪರವಾನಗಿ ನೀಡುವ ಕುರಿತು

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) ಮಾನ್ಯ ಅಧ್ಯಕ್ಷರೆ, ಕೃಷ್ಣ ನದಿ ಹಿನ್ನೀರಿನಿಂದ ರೈತರ ಹೊಲಗಳಿಗೆ ನೀರು ಉಪಯೋಗಿಸಿಕೊಳ್ಳಲು ಈ ಮೊದಲು ಚೀಫ್ ಇಂಜಿನಿಯರ್ (ಆಲಮಟ್ಟಿ) ಅವರು ಪರವಾನಗಿ ಕೊಡುತ್ತಿದ್ದರು ಆದರೆ ಕಳೆದ ಎರಡು ವರ್ಷಗಳಿಂದ ಸರ್ಕಾರ ಅದನ್ನು ರದ್ದುಪಡಿಸಿ ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಬೆಂಗಳೂರು ಇವರಿಂದ ಪಡೆಯಬೇಕೆಂದು ನಿಗದಿಪಡಿಸಿದೆ

ಆದಕಾರಣ ಪ್ರತಿಯೊಬ್ಬ ರೈತರೂ ಈ ಪರವಾನಗಿಯನ್ನು ಪಡೆಯಲು ಬೆಂಗಳೂರಿಗೆ ಬರಲು ಸಾಧ್ಯವಿಲ್ಲ ಆದಕಾರಣ ರೈತರಿಗೆ ಆಗುವ ತೊಂದರೆಯನ್ನು ನಿವಾರಣೆ ಮಾಡಲು ತಾವು ದಯವಿಟ್ಟು ಈ ಮೊದಲೇ ಏನು ವ್ಯವಸ್ಥೆ ಇತ್ತೋ ಅದೇ ರೀತಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ ಏಕೆಂದರೆ ಸುಮಾರು ವರ್ಷಗಳಿಂದ ಪರವಾನಗಿ ಪಡೆಯಲು ಕೊಟ್ಟಂಥ ಅರ್ಜಿಗಳು ಪೆಂಡಿಂಗ್ ಇರುವುದರಿಂದ ರೈತರಿಗೆ ತೊಂದರೆಯಾಗಿದೆ ಆದಕಾರಣ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂಥ ವಿಷಯದ ಬಗ್ಗೆ ಸರ್ಕಾರ ಗಮನ ಹರಿಸುತ್ತದೆ

ಶ್ರೀ ಗೋವಿಂದ ಎಂ ಕಾರಜೋಳ್ ಮಾನ್ಯ ಅಧ್ಯಕ್ಷರೆ, ವಾಟರ್ ವಿಚಾರದಲ್ಲೂ ಪರ್ಮಿಶನ್ ತೆಗೆದುಕೊಳ್ಳಲು ಬೆಂಗಳೂರಿಗೆ ಹಾಲಿ ವ್ಯವಸ್ಥೆಯಲ್ಲಿ ಬರಬೇಕಾಗಿದೆ ಅದಕ್ಕೆ ನಾನು ಏನು ಹೇಳುತ್ತೇನೆಂದರೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಲಿವಲ್‌ನಲ್ಲಿಯೇ ವಾಟರ್ ಪರ್ಮಿಶನ್ ಕೊಡುವಂತೆ ಆಗಬೇಕು ಅದನ್ನು ಬಿಟ್ಟು ಇದಕ್ಕಾಗಿ ವಿಧಾನ ಸೌಧಕ್ಕೆ ಏಕೆ ಬರುವಂತಾಗಬೇಕು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡೋಣ

22 ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಹಾಗೂ ಬಿರುಗಾಳಿಯಿಂದ ಮನೆಗಳು ಹಾಗೂ ವಿದ್ಯುತ್ ಕಂಬಗಳು ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದರ ಬಗ್ಗೆ

ಶ್ರೀ ಕೆ ರಘುಪತಿ ಭಟ್ (ಉಡುಪಿ) ಮಾನ್ಯ ಅಧ್ಯಕ್ಷರೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರ್ನಾಲ್ಕು ದಿವಸಗಳಿಂದ ವ್ಯಾಪಕವಾಗಿ ಮಳೆ ಹಾಗೂ ಬಿರುಗಾಳಿ ಬಂದು ಬಹಳಷ್ಟು ಮನೆಗಳು, ವಿದ್ಯುತ್ ಕಂಬಗಳು ಹಾನಿಗೊಳಗಾಗಿವೆ ಮರಗಳು ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗಿದೆ ನನ್ನ ಉಡುಪಿ ಕ್ಷೇತ್ರದಲ್ಲಿ ಎರಡು ಶಾಲೆಗಳ ಮೇಲೆ ಮರ ಬಿದ್ದು ಆ ಎರಡು ಶಾಳೆಗಳಿಗೂ ಬಹಳ ಹಾನಿಯಾಗಿದ್ದು ಶಾಲೆಯನ್ನು ನಡೆಸುವುದಕ್ಕೇ ಆಗದ ಪರಿಸ್ಥಿತಿ ನಿರ್ಮಾಣವಾಗಿದೆ ನಮ್ಮ ಜಿಲ್ಲೆಗೆ ಬರ ಪರಿಹಾರ ನಿಧಿಯಿಂದ ಯಾವುದೇ ಪರಿಹಾರ ಸಿಗುವುದಿಲ್ಲ ಆದುದರಿಂದ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಕನಿಷ್ಠ ಮೂರು ಕೋಟಿ ರೂಪಾಯಿಗಳನ್ನಾದರೂ ಸರ್ಕಾರ ತುರ್ತಾಗಿ

ಬಿಡುಗಡೆ ಮಾಡಬೇಕೆಂದು ವಿನಂತಿಸುತ್ತೇನೆ ಇತ್ತೀಚೆಗೆ ಬೀಳುತ್ತಿರುವ ಮಳೆಗಳಲ್ಲಿಯೇ ಇದು ದೊಡ್ಡ ಪ್ರಮಾಣದ ಮಳೆಯಾಗಿದ್ದು ಇದರಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಸಮಸ್ಯೆಯೂ ಆಗಿದೆ ಒಂದು ಕಡೆ ಕಡಲ ಕೊರತೆ ಕೂಡ ಜಾಸ್ತಿ ಉಂಟಾಗಿದೆಯಾದ್ದರಿಂದ ಕಡಲ ಕಿನಾರೆಯಲ್ಲಿರುವಂಥ ಜನರಿಗೆ ಇದರಿಂದ ಹೆಚ್ಚು ತೊಂದರೆಯಾಗುತ್ತಿದೆ ಮಳೆ ಮತ್ತು ಗಾಳಿಯಿಂದಲೂ ಮರಗಳು ಬೀಳುತ್ತಿವೆಯಲ್ಲದೆ, ಮನೆಗಳೂ ಬೀಳುತ್ತಿವೆ ಇವೆಲ್ಲವನ್ನೂ ಗಮನಿಸಿ ಆದಷ್ಟು ಶೀಘ್ರವಾಗಿ ನಮ್ಮ ಜಿಲ್ಲೆಗೆ ಪ್ರಕೃತಿ ವಿಕೋಪ ನಿಧಿಯಿಂದ ಮೂರು ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕೆಂದು ಮತ್ತೊಮ್ಮೆ ವಿನಂತಿಸುತ್ತೇನೆ ಏಕೆಂದರೆ, ಬಹಳ ಕಳವಳಕಾರಿಯಾದ ರೀತಿಯಲ್ಲಿ ಮಳೆ ಬೀಳುತ್ತಿದೆ, ಗಾಳಿ ಬೀಸುತ್ತಿದೆ ಆದ್ದರಿಂದ, ಸರ್ಕಾರ ಈ ದಿಸೆಯಲ್ಲಿ ತಕ್ಷಣ ಪ್ರತಿಕ್ರಿಯಿಸಬೇಕೆಂದು ವಿನಂತಿಸುತ್ತೇವೆ

ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವುದು ನಿಜ ಕಳೆದ ಎರಡೂಮೂರು ದಿವಸಗಳಿಂದ ಮಂಗಳೂರು ಹಾಗೂ ನಾರ್ತ್ ಕೆನರಾ ಭಾಗಗಳಲ್ಲಿ ಹೆಚ್ಚಿಗೆ ಮಳೆಯಾಗುತ್ತಿದೆ ಅದಕ್ಕೆ ಯಾವುದರಿಂದ ಹಣ ಒದಗಿಸಬಹುದು ಎಂಬುದನ್ನು ನೋಡುತ್ತೇವೆ ಏಕೆಂದರೆ ನಮ್ಮ ಜನರು ಕಷ್ಟಕ್ಕೆ ಸಿಲುಕಿದಾಗ ತಕ್ಷಣ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಜವಾಬ್ದಾರಿಯೂ ಆಗಿರುತ್ತದೆ ಅದಕ್ಕೆ ಯಾವ ತರಹದಲ್ಲಿ ಕೆಲಸ ಆಗಬೇಕು ಮತ್ತು ಯಾವ ತರಹ ಹಣ ಒದಗಿಸಬೇಕೆಂದು ಸರ್ಕಾರ ತೀರ್ಮಾನಿಸಿದೆ ಅದರ ಪ್ರಕಾರ ಕೊಡಿಸುತ್ತೇವೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಸೆಂಟ್ರಲ್ ರಿಲೀಫ್ ಫಂಡ್‌ನಿಂದ ಸ್ವಲ್ಪ ಜಾಸ್ತಿ ಹಣ ಕೊಡಿಸಿದರೆ ಒಳ್ಳೆಯದು

23 ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ ಡಿ ಎಫ್ ಓ ಅವರು ಗಂಧದ ಮರಗಳನ್ನು ಸಾಗುಸುತ್ತಿರುವ ಬಗ್ಗೆ ಹಾಗೂ ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಚಳುವಳಿ ಮಾಡುತ್ತಿರುವುದರ ಬಗ್ಗೆ

ಶ್ರೀ ಎಸ್ ಎಲ್ ಧರ್ಮೇಗೌಡ (ಬೀರೂರು) ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ ಒಬ್ಬ ಡಿ ಎಫ್ ಓ ಅವರು ಗಂಧದ ಕಾರ್‌ನ್ನು ಹಿಡಿದು ಆ ಕಾರಿಗೆ ಬೇರೆ ಜೀಪಿನ ನೇಮ್ ಪ್ಲೇಟ್‌ನ್ನು ಹಾಕಿಕೊಂಡು ಓಡಿಸುತ್ತಿದ್ದಂಥ ಸಂದರ್ಭದಲ್ಲಿ ಆರ್ ಟಿ ಓ ಆಫೀಸ್‌ನ ಬ್ರೇಕ್ ಇನ್ಸ್‌ಪೆಕ್ಟರ್‌ರವರು ಆ ಕಾರ್‌ನ್ನು ಹಿಡಿದರು ಕೋರ್ಟ್‌ಗೆ ಹೋಗುತ್ತೇವೆ ಎಂದು ಹೇಳಿದರು ಕೋರ್ಟ್‌ಗೆ ಹೋಗುತ್ತೇವೆ ಎಂದು ಹೇಳಿಕೊಂಡು ಕೋರ್ಟ್ ಮುಂದೆ ಕಾರ್‌ನ್ನು ಬಿಟ್ಟು ಓಡಿ ಹೋದರು ಅವರು ಹಾಗೆ ಓಡಿ ಹೋಗಲು ಉದ್ದೇಶವಾದರೂ ಏನಿತ್ತು ಎಂಬ ಬಗ್ಗೆ ಹೇಳಬೇಕು ಇವೊತ್ತು ಒಬ್ಬ ಜಿಲ್ಲಾ ಮಟ್ಟದ ಡಿ ಎಫ್ ಓ ಆಗಿರತಕ್ಕಂಥ ಒಬ್ಬ ಉನ್ನತ ಅಧಿಕಾರಿ ಈ ರೀತಿ ತಪ್ಪುಗಳನ್ನು ಮಾಡಿದಾಗ ಸರ್ಕಾರ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ